# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **832**

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ್
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 16.12.2024

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಬಿಪಿಎಲ್, ಎಪಿಎಲ್ ಮತ್ತು ಅಂತ್ಯೋದಯ ಪಡಿತರ ಚೀಟಿಗಳನ್ನು ಹೊಂದಿರುವ ಕುಟುಂಬಗಳ ಸಂಖ್ಯೆ ಎಷ್ಟು; ಪಡಿತರ ಚೀಟಿಯನ್ನು ಪಡೆಯಲು ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳೇನು;</td><td>ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಪಡಿತರ ಚೀಟಿ ಹಾಗೂ ಫಲಾನುಭವಿಗಳ ವಿವರ ಈ ಕೆಳಕಂಡಂತ್ತಿವೆ:
<table>
<tr><th>ವಿವರ</th><th>ಪಡಿತರ ಚೀಟಿಗಳು</th><th>ಫಲಾನುಭವಿಗಳು</th></tr>
<tr><td>ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳು</td><td>10,80,648</td><td>43,66,756</td></tr>
<tr><td>ಆದ್ಯತಾ ಪಡಿತರ ಚೀಟಿಗಳು</td><td>1,17,58,582</td><td>3,98,89,368</td></tr>
<tr><td>ಆದ್ಯತೇತರ ಪಡಿತರ ಚೀಟಿಗಳು</td><td>25,25,418</td><td>86,45,628</td></tr>
<tr><td>ಒಟ್ಟು ಪಡಿತರ ಚೀಟಿಗಳು</td><td>1,53,64,648</td><td>5,29,01,752</td></tr>
</table>
ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಗಳನ್ನು ಪಡೆಯುವ ಬಗ್ಗೆ ಸರ್ಕಾರವು 2017ರಲ್ಲಿ ಹೊರಗಿಡುವ ಮಾನದಂಡಗಳನ್ನು ರೂಪಿಸಿದೆ. ವಿವರವು ಈ ಕೆಳಕಂಡತಿರುತ್ತದೆ.<br>
➢ ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ಜಿ.ಎಸ್.ಟಿ/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.<br>
➢ ಗ್ರಾಮೀಣ ಪ್ರದೇಶಗಳಲ್ಲಿ 03 ಹೆಕ್ಟರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ, ನಗರ ಪ್ರದೇಶಗಳಲ್ಲಿ 1000ಚದರ</td></tr>
</table>

| | | |
|---|---|---|
| | | ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.<br>➤ ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.<br>➤ ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು. |
| ಆ. | 2023-ಏಪ್ರಿಲ್ ನಿಂದ ಅಕ್ಟೋಬರ್-2024 ತಿಂಗಳ ಅಂತ್ಯದವರೆಗೆ ಬಿಪಿಎಲ್, ಎಪಿಎಲ್ ಮತ್ತು ಅಂತ್ಯೋದಯ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವ ಕುಟುಂಬಗಳ ಸಂಖ್ಯೆ ಎಷ್ಟು; ಹೊಸ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳಿಗೆ ಅರ್ಜಿ ಸಲ್ಲಿಸಿದ ದಿನಾಂಕದಿಂದ ಎಷ್ಟು ಸಮಯದ ಒಳಗಾಗಿ ಪಡಿತರ ಚೀಟಿಯನ್ನು ನೀಡಲಾಗುತ್ತದೆ: ಅರ್ಜಿ ಸಲ್ಲಿಸಲು ಅವಕಾಶ ನೀಡಿಲ್ಲದಿದ್ದರೆ ಕಾರಣಗಳೇನು: (ಸಂಪೂರ್ಣ ಮಾಹಿತಿ ನೀಡುವುದು) | ದಿನಾಂಕ:29.11.2024ರ ಅಂತ್ಯಕ್ಕೆ ಆದ್ಯತಾ ಪಡಿತರ ಚೀಟಿ ಕೋರಿ 2,10,743 ಹಾಗೂ ಆದ್ಯತೇತರ ಪಡಿತರ ಚೀಟಿ ಕೋರಿ 70,436 ಅರ್ಜಿಗಳು ವಿಲೇವಾರಿಗೆ ಬಾಕಿ ಇರುತ್ತವೆ.<br><br>ಹೊಸ ಆದ್ಯತಾ ಪಡಿತರ ಚೀಟಿಯನ್ನು ಕೋರಿ ಆಗಸ್ಟ್-2023ರವರೆಗೆ ಸಲ್ಲಿಸಲಾಗಿದ್ದ 2,95,986 ಅರ್ಜಿಗಳ ವಿಲೇವಾರಿಗೊಳಿಸಲು ಆದೇಶಿಸಲಾಗಿದ್ದು, ಅದರಂತೆ ಅರ್ಜಿಗಳನ್ನು ವಿಲೇಗೊಳಿಸಲಾಗಿರುತ್ತದೆ. ಇದಲ್ಲದೇ ತುರ್ತು ವೈದ್ಯಕೀಯ ಪರಿಸ್ಥಿತಿ ಹಿನ್ನಲೆ ಇರುವ ಅರ್ಹ ಫಲಾನುಭವಿಗಳಿಗೆ, ಇ-ಶ್ರಮ್ ನೋಂದಾಯಿತ ಕಾರ್ಮಿಕರಿಗೆ, ಬುಡಕಟ್ಟು ಜನಾಂಗದವರಿಗೆ ಆದ್ಯತಾ ಪಡಿತರ ಚೀಟಿಗಳನ್ನು ನೀಡುವ ಕಾರ್ಯ ನಿರಂತರವಾಗಿ ಜರುಗುತ್ತಿದೆ.<br><br>ಇಲಾಖೆಯಲ್ಲಿ ಬಳಸಲಾಗುತ್ತಿರುವ ಸರ್ವರ್‌ಗಳು ಬಹಳ ಹಳೆಯದಾಗಿದ್ದು, ಸದರಿ ಸರ್ವರ್‌ಗಳ ಸಾಮರ್ಥ್ಯವನ್ನು ಹೆಚ್ಚಿಸಲು ಸಾಧ್ಯವಾಗಿರುವುದಿಲ್ಲ. ಈ ಕಾರಣದಿಂದಾಗಿ ಎನ್.ಐ.ಸಿ ಯಿಂದ ಕೆ.ಎಸ್.ಡಿ.ಸಿ (Karnataka State Data Centre)ಗೆ ಆಹಾರ ತಂತ್ರಾಂಶದ Migration ಕಾರ್ಯವು ಪ್ರಗತಿಯಲ್ಲಿದ್ದು ಅಂತಿಮ ಹಂತದಲ್ಲಿರುತ್ತದೆ. ಸದರಿ ಕಾರ್ಯವು ಪೂರ್ಣಗೊಂಡ ನಂತರ ಆದ್ಯತಾ ಪಡಿತರ ಚೀಟಿ ತಿದ್ದುಪಡಿ ಮಾಡುವ ಪ್ರಕ್ರಿಯೆ ನಿರಂತರವಾಗಿರುತ್ತದೆ. |
| ಇ | 2023-24 ಮತ್ತು 2024-25ನೇ ಸಾಲಿನಲ್ಲಿ ಅನ್ನಭಾಗ್ಯ ಯೋಜನೆಯಡಿ ಪಡಿತರ ಬದಲಾಗಿ ಇಲ್ಲಿಯವರೆಗೆ ಎಷ್ಟು ಮೊತ್ತವನ್ನು ಪಡಿತರ ಚೀಟಿದಾರರಿಗೆ ಪಾವತಿ ಮಾಡಲಾಗಿದೆ; ಫಲಾನುಭವಿಗಳ ಸಂಖ್ಯೆ ಎಷ್ಟಿದೆ; ಪಾವತಿ ಮಾಡಲಾದ ಫಲಾನುಭವಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಸಂಖ್ಯೆ ಎಷ್ಟು; | ಜುಲೈ-2023ರ ಮಾಹೆಯಿಂದ ಅರ್ಹ ಫಲಾನುಭವಿಗಳಿಗೆ DBT ಮೂಲಕ ವರ್ಗಾಯಿಸಲಾದ ಮೊತ್ತದ ವಿವರ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಈ | ಪಡಿತರ ಚೀಟಿಗಳ ತಿದ್ದುಪಡಿ ಮಾಡುವುದು ಹಾಗೂ ಹೊಸ ಪಡಿತರ ಚೀಟಿಯನ್ನು ಪಡೆಯಲು ಸರ್ವರ್ ಸಮಸ್ಯೆಯಿರುವುದರಿಂದ ಜನರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ಕಾರಿ ಯೋಜನೆಗಳಿಗೆ ಹಾಗೂ ಆರೋಗ್ಯ ಸಂಬಂಧಿಸಿದ ಸವಲತ್ತುಗಳನ್ನು ಪಡೆಯಲು ಪಡಿತರ ಚೀಟಿಯು ಅತ್ಯವಶ್ಯಕವಾಗಿದ್ದು, ಸರಿಯಾದ ಸಮಯದಲ್ಲಿ ಸಾರ್ವಜನಿಕರಿಗೆ ಪಡಿತರ ಚೀಟಿಯ ತಿದ್ದುಪಡಿ ಮತ್ತು ವಿತರಣೆ ಮಾಡದಿದ್ದರೆ ಅವರನ್ನು ವಂಚಿಸಿದಂತೆ ಆಗುವುದಿಲ್ಲವೇ; | ಬಂದಿರುತ್ತದೆ.<br>ಇಲಾಖೆಯಲ್ಲಿ ಬಳಸಲಾಗುತ್ತಿರುವ ಸರ್ವರ್‌ಗಳು ಹಳೆಯದಾಗಿದ್ದು, ಸದರಿ ಸರ್ವರ್‌ಗಳ ಸಾಮರ್ಥ್ಯವನ್ನು ಹೆಚ್ಚಿಸಲು ಸಾಧ್ಯವಾಗಿರುವುದಿಲ್ಲ. ಈ ಕಾರಣದಿಂದಾಗಿ ಎನ್.ಐ.ಸಿಯಿಂದ ಕೆ.ಎಸ್.ಡಿ.ಸಿ (Karnataka State Data Centre)ಗೆ ಆಹಾರ ತಂತ್ರಾಂಶದ Migration ಕಾರ್ಯವು ಪ್ರಗತಿಯಲ್ಲಿರುತ್ತದೆ.<br>ಆದಾಗ್ಯೂ ತುರ್ತು ವೈದ್ಯಕೀಯ ಪರಿಸ್ಥಿತಿಯ ಹಿನ್ನಲೆ ಇರುವ ಅರ್ಹ ಫಲಾನುಭವಿಗಳಿಗೆ, ಇ-ಶ್ರಮ್ ನೋಂದಾಯಿತ ಕಾರ್ಮಿಕರಿಗೆ, ಬುಡಕಟ್ಟು ಜನಾಂಗದವರಿಗೆ ಆದ್ಯತಾ ಪಡಿತರ ಚೀಟಿಗಳನ್ನು ನೀಡುವ ಕಾರ್ಯ ನಿರಂತರವಾಗಿ ಜರುಗುತ್ತಿದೆ. |
| ಉ | 2023-ಏಪ್ರಿಲ್ ನಿಂದ ಅಕ್ಟೋಬರ್-2024 ತಿಂಗಳವರೆಗೆ ಎಷ್ಟು ಪಡಿತರ ಕಾರ್ಡ್‌ಗಳನ್ನು ರದ್ದುಪಡಿಸಲಾಗಿರುತ್ತದೆ; ಯಾವ ಕಾರಣಕ್ಕಾಗಿ ರದ್ದುಪಡಿಸಲಾಗಿದೆ; ಪಡಿತರ ಕಾರ್ಡ್‌ಗಳನ್ನು ರದ್ದುಪಡಿಸಲು ಜಾರಿಯಲ್ಲಿರುವ ನಿಯಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | 2023-ಏಪ್ರಿಲ್‌ನಿಂದ ನವೆಂಬರ್ ಮಾಹೆವರೆವಿಗೂ ರದ್ದುಪಡಿಸಲಾದ ಆದ್ಯತಾ ಪಡಿತರ ಚೀಟಿಗಳ ವಿವರಗಳನ್ನು ಅನುಬಂಧ -2 ರಲ್ಲಿ ಒದಗಿಸಲಾಗಿದೆ.<br>ಸರ್ಕಾರದ ಮಾನದಂಡಗಳ ವಿರುದ್ಧವಾಗಿ ಪಡಿತರ ಚೀಟಿಗಳನ್ನು ಪಡೆದವರ ಮಾಹಿತಿಯನ್ನು 'ಕುಟುಂಬ' ತಂತ್ರಾಂಶದಿಂದ ಪಡೆದಿದ್ದು, ಆದಾಯ ತೆರಿಗೆ ಪಾವತಿದಾರರು, ವಾರ್ಷಿಕ ರೂ.1.20 ಲಕ್ಷಕ್ಕಿಂತ ಹೆಚ್ಚಿರುವ ಫಲಾನುಭವಿಗಳು, ಸರ್ಕಾರಿ ನೌಕರರು, ಮೃತ ಫಲಾನುಭವಿಗಳು ಮತ್ತು 06 ತಿಂಗಳಿನಿಂದ ಪಡಿತರವನ್ನು ಪಡೆಯದೇ ಇರುವ ಆದ್ಯತಾ ಪಡಿತರ ಚೀಟಿದಾರರ ಮಾಹಿತಿಯನ್ನು ಪಡೆಯಲಾಗಿರುತ್ತದೆ. |

**ಆನಾಸ 403 ಡಿಆರ್‌ಎ 2024 (ಇ-ಆಫೀಸ್)**

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು

ಅನುಬಂಧ - 1

| ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆ ಯಿಂದ ಚುನಾಯಿತರಾದವರು) ವಿಧಾನ ಪರಿಷತ್ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 832 | | | |
|---|---|---|---|
| ಅನುಬಂಧ -1 | | | |
| 2023-24 ಹಾಗೂ 2024-25ನೇ ಸಾಲಿನಲ್ಲಿ ರದ್ದುಪಡಿಸಲಾಗಿರುವ ಆದ್ಯತಾ ಪಡಿತರ ಚೀಟಿ ವಿವರ | | | |
| ಕ್ರ. ಸಂ. | ಜಿಲ್ಲೆಯ ಹೆಸರು | 2023-24 | 2024-25 |
| 1 | ಬಾಗಲಕೋಟೆ | 1,748 | 384 |
| 2 | ಬಳ್ಳಾರಿ | 1,296 | 224 |
| 3 | ಬೆಂಗಳೂರು ಪೂರ್ವ ವಲಯ | 664 | 512 |
| 4 | ಬೆಂಗಳೂರು ಉತ್ತರ ವಲಯ | 1,187 | 81 |
| 5 | ಬೆಂಗಳೂರು ದಕ್ಷಿಣ ವಲಯ | 821 | 81 |
| 6 | ಬೆಂಗಳೂರು ಪಶ್ಚಿಮ ವಲಯ | 1,301 | 221 |
| 7 | ಬೆಳಗಾವಿ | 11,879 | 1,375 |
| 8 | ಬೆಂಗಳೂರು ನಗರ ಜಿಲ್ಲೆ | 2,271 | 492 |
| 9 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 1,302 | 439 |
| 10 | ಬೀದರ್ | 678 | 250 |
| 11 | ಚಾಮರಾಜನಗರ | 2,118 | 207 |
| 12 | ಚಿಕ್ಕಬಳ್ಳಾಪುರ | 1,422 | 520 |
| 13 | ಚಿಕ್ಕಮಗಳೂರು | 2,402 | 362 |
| 14 | ಚಿತ್ರದುರ್ಗ | 1,972 | 395 |
| 15 | ದಕ್ಷಿಣ ಕನ್ನಡ | 507 | 269 |
| 16 | ದಾವಣಗೆರೆ | 2,245 | 468 |
| 17 | ಧಾರವಾಡ | 3,234 | 488 |
| 18 | ಗದಗ | 2,242 | 441 |
| 19 | ಹಾಸನ | 2,285 | 771 |
| 20 | ಹಾವೇರಿ | 1,746 | 277 |
| 21 | ಕಲಬುರಗಿ | 2,515 | 952 |
| 22 | ಕೊಡಗು | 1,695 | 249 |
| 23 | ಕೋಲಾರ | 1,335 | 409 |
| 24 | ಕೊಪ್ಪಳ | 1,392 | 467 |
| 25 | ಮಂಡ್ಯ | 2,488 | 818 |
| 26 | ಮೈಸೂರು | 4,654 | 1,441 |
| 27 | ರಾಯಚೂರು | 1,661 | 333 |
| 28 | ರಾಮನಗರ | 2,348 | 745 |
| 29 | ಶಿವಮೊಗ್ಗ | 1,556 | 625 |
| 30 | ತುಮಕೂರು | 4,327 | 895 |
| 31 | ಉಡುಪಿ | 970 | 168 |
| 32 | ಉತ್ತರ ಕನ್ನಡ | 1,709 | 420 |
| 33 | ವಿಜಯನಗರ | 2,136 | 201 |
| 34 | ವಿಜಯಪುರ | 1,952 | 610 |
| 35 | ಯಾದಗಿರಿ | 284 | 129 |
| | ಒಟ್ಟು | 74,342 | 16,719 |

ಅಪರ ನಿರ್ದೇಶಕರು (ಐಟಿ)
ಆಹಾರ, ನಾಗರಿಕ ಸರಬರಾಜು ಮತ್ತು

| | | DBT Beneficiaries | SC Beneficiaries | | ST Beneficiaries | | SC+ST Beneficiaries | |
|---|---|---|---|---|---|---|---|---|
| Sl. | Month | Count | Count | % | Count | % | Count | % |
| 1 | 2 | 3 | 4 | 5 | 6 | 7 | 8 | 9 |
| 1 | July-2023 | 3,45,38,958 | 6,30,754 | 1.83% | 2,67,625 | 0.77% | 8,98,379 | 2.60% |
| 2 | Aug-2023 | 3,69,36,906 | 48,03,498 | 13.00% | 21,28,612 | 5.76% | 69,32,110 | 18.77% |
| 3 | Sep-2023 | 3,82,62,103 | 59,22,246 | 15.48% | 26,16,944 | 6.84% | 85,39,190 | 22.32% |
| 4 | Oct-2023 | 3,92,74,053 | 61,70,922 | 15.71% | 27,07,979 | 6.90% | 88,78,901 | 22.61% |
| 5 | Nov-2023 | 3,97,14,391 | 62,48,485 | 15.73% | 27,39,940 | 6.90% | 89,88,425 | 22.63% |
| 6 | Dec-2023 | 3,99,25,249 | 55,97,365 | 14.02% | 24,85,302 | 6.22% | 80,82,667 | 20.24% |
| 7 | Jan-2024 | 4,02,43,966 | 59,15,002 | 14.70% | 25,90,678 | 6.44% | 85,05,680 | 21.14% |
| 8 | Feb-2024 | 4,08,87,361 | 59,96,707 | 14.67% | 26,24,656 | 6.42% | 86,21,363 | 21.09% |
| 9 | Mar-2024 | 4,09,34,896 | 60,01,209 | 14.66% | 26,27,989 | 6.42% | 86,29,198 | 21.08% |
| 10 | Apr-2024 | 4,07,55,079 | 69,99,089 | 17.17% | 29,74,920 | 7.30% | 99,74,009 | 24.47% |
| 11 | May-2024 | 4,07,76,390 | 71,06,174 | 17.43% | 30,15,764 | 7.40% | 1,01,21,938 | 24.82% |
| 12 | Jun-2024 | 4,08,06,293 | 63,17,846 | 15.48% | 26,69,330 | 6.54% | 89,87,176 | 22.02% |
| 13 | Jul-2024 | 4,08,46,548 | 72,04,211 | 17.64% | 30,41,718 | 7.45% | 1,02,45,929 | 25.08% |
| 14 | Aug-2024 | 4,08,46,537 | 72,42,041 | 17.73% | 30,49,735 | 7.47% | 1,02,91,776 | 25.20% |